ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರೆ ಸ್ಥಳಕ್ಕೆ ಹೋಗಿದ್ದಾರೆಂದರೆ, ಅಲ್ಲಿ treatment ಕೊಡಿಸುತ್ತಾರೆ, ಎಲ್ಲಾ ರಕ್ಷಣೆಯನ್ನು ಕೊಡುತ್ತಾರೆ. ಇದರ ಬಗ್ಗೆ ಅನುಮಾನ ಬೇಡ. ಅದು ತಮಗೆ ಗೊತ್ತಾಯಿತು, ಇನ್ನು compensation ಬಗ್ಗೆ ನೋಡೋಣ.

ಶ್ರೀ ಹೆಚ್.ಡಿ. ರೇವಣ್ಣ:– ಅದು ಕೊಡಿ

ಶ್ರೀ ಟಿ.ಬಿ.ಜಯಚಂದ್ರ:– ಮಾನ್ಯ ಮುಖ್ಯ ಮಂತ್ರಿಯವರು ಬರಲಿ.

ಶ್ರಿ ಹೆಚ್.ಡಿ. ರೇವಣ್ಣ:– ಅವರು ಹೆಣವನ್ನು ದಫನ್ ಮಾಡಬೇಕು, ಎಲ್ಲಿಂದ ಹಣ ತರಬೇಕು? ಇದನ್ನು ಸರ್ಕಾರ ಕೂಡಲೇ ಕೊಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:– ಆಯಿತು ಹೇಳುತ್ತೇನೆ.

ಅಧ್ಯಕ್ಷರು:– ಈಗ Zero Hourನಲ್ಲಿ ಮಾನ್ಯ ಬೋಪಯ್ಯನವರೆ ವಿಷಯ ಪ್ರಸ್ತಾಪ ಮಾಡಿ, ಈ ವಿಷಯ ಚರ್ಚೆಯಾಗಿದೆ.

2. **ವಿಷಯ:–** ಉಡುಪಿ ಮಳೆಯಿಂದ ಆಗಿರುವ ಅನಾಹುತದ ಬಗ್ಗೆ.

ಶ್ರೀ ಕೆ.ಜಿ.ಬೋಪಯ್ಯ (ವಿರಾಜಪೇಟೆ):– ಮಾನ್ಯ ಅಧ್ಯಕ್ಷರೆ, ಚರ್ಚೆಯಾಗಿದೆ, ಇದು ಶೂನ್ಯವೇಳೆಯಾಗಿರುವುದರಿಂದ ಅದಕ್ಕೆ ಸೀಮಿತವಾಗಿಯೇ ಹೇಳುತ್ತೇನೆ. ಇವತ್ತು ಕೊಡಗು ಜಿಲ್ಲೆಯಲ್ಲಿ ಮೇ ತಿಂಗಳ ಕೊನೆ ವಾರದಿಂದ ಇವತ್ತಿನವರೆಗೂ ನಿರಂತರವಾಗಿ ಮಳೆ ಬರುತ್ತಿದೆ. ಕಳೆದ ವರ್ಷ ಈ ವೇಳೆಗೆ ಕೆ.ಆರ್.ಎಸ್.ನಲ್ಲಿ 77 ಅಡಿ ಇತ್ತು, ಇವತ್ತು ತುಂಬಿದೆ, ಎಲ್ಲರೂ ಸಂತೋಷದಲ್ಲಿದ್ದೀರಿ, ಅದು ಬೇರೆ ವಿಷಯ. ಆದರೆ ಕೊಡಗಿನಲ್ಲಿ ಪರಿಸ್ಥಿತಿ ಏನಾಗಿದೆಯೆಂಬ ಬಗ್ಗೆ ಚರ್ಚೆಯಾದಾಗ ಕಂದಾಯ ಸಚಿವರು ದೀರ್ಘವಾಗಿ ಉತ್ತರವನ್ನು ಕೊಟ್ಟರು, ಮಾಡುತ್ತೇವೆಂದು ಹೇಳಿದರು. ಆದರೆ ಏನೂ ಕೊಡಲಿಲ್ಲ, ಮಳೆಯ ಪರಿಣಾಮ ಈಗ ಏನಾಗಿದೆಯೆಂದರೆ, ನನ್ನ ಸ್ವಂತ ಗ್ರಾಮ ಪಂಚಯಿತಿ ಆಗಿದ್ದು, ಸನ್ಮಾನ್ಯ ಅಪ್ಪಚ್ಚುರಂಜನ್‌ರವರ ಕ್ಷೇತ್ರವಾಗಿದ್ದು, ನನ್ನ ಗ್ರಾಮ ಪಂಚಾಯಿತಿಯೊಳಗೆ ಒಂದು ಬೆಟ್ಟ ಒಂದು ಕಿ.ಮೀ.ವರೆಗೆ ಬಾಯಿ ಬಿಟ್ಟಿದೆ. ಅಲ್ಲಿ ಸಾಕಷ್ಟು ಬಡ ಜನರಿದ್ದಾರೆ, ಬೆಟ್ಟ

ಒಡೆದು ಹೋಗಿದೆ, ರಸ್ತೆಗಳ ಪರಿಸ್ಥಿತಿ ಬೇಡ. ಇವತ್ತು ಕಾಫಿ ತೋಟದ ಬಗ್ಗೆ ಮಳೆ ಜೂನ್ ಮೊದಲನೆ ವಾರದಿಂದಲೇ ಬಂದಿದ್ದರಿಂದ ಗೊಬ್ಬರ ಹಾಕಿಲ್ಲ, ಅಲ್ಲಿ ಗೊಬ್ಬರವನ್ನು ಹಾಕುವುದಕ್ಕೆ ಆಗಿಲ್ಲ, spray ಮಾಡುವುದಕ್ಕೆ ಆಗಿಲ್ಲ, ಒಂದು ಕಡೆ ಆನೆಗಳ ಕಾಟವಿದ್ದು, ಇನ್ನೊಂದು ಕಡೆ spray ಮಾಡಿಲ್ಲ, ಗೊಬ್ಬರ ಹಾಕಿಲ್ಲ. ಅದರ ಪರಿಣಾಮ ಏನಾಗಿದೆಯೆಂದರೆ, ಕಾಫಿ ಎಲ್ಲಾ ಕೆಳಗಡೆ ಇದೆ, ಕಟಾವ್ ಮಾಡುವುದಕ್ಕೆ ಆಗುವುದಿಲ್ಲ, ಕೊಳೆ ರೋಗ ಬಂದು ಹೋಗಿದೆ. ನಾನು ಮೊನ್ನೆ ಕೂಡ ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿದೆ, ತಕ್ಷಣ ಕಾಫಿ ಬೆಳೆಗೆ calamity ನಿಯಮದ ಪ್ರಕಾರ commercial crop ಕೊಡುವುದಕ್ಕೆ ಬರುವುದಿಲ್ಲ, ಹಿಂದೆ ಎಲ್ಲಾ ಆದೇಶ ಮಾಡಿದೆ. ಆ ಆದೇಶವನ್ನು ಜಿಲ್ಲಾಧಿಕಾರಿಗಳಿಗೆ ಕೊಡಬೇಕೆನ್ನುವ ಮಾತನ್ನು ಹೇಳಿದೆ. ಒಬ್ಬರನ್ನು in-charge Secretary ಎಂದು ಮಾಡಿದ್ದಾರೆ. ಅವರು ಇವತ್ತಿನವರೆಗೆ ಜಿಲ್ಲೆಗೆ ಹೋಗಿಲ್ಲ. ಉಸ್ತುವಾರಿ ಸಚಿವರು ಒಂದು ಸಭೆ ಮಾಡಿದ್ದನ್ನು ಬಿಟ್ಟರೆ ಮುಂದಿನ ಕ್ರಮ ಏನೂ ಇಲ್ಲ. ಇವತ್ತು ಅಲ್ಲಿ ಅಧಿಕಾರಿಗಳೇ ಇಲ್ಲ. ಕೃಷಿ ಇಲಾಖೆಯಲ್ಲಿ ಜೆ.ಡಿ. ಇಲ್ಲ, ಡಿ.ಡಿ. ಇಲ್ಲ, ಎ.ಡಿ. ಇಲ್ಲ, ತೋಟಗಾರಿಕೆಯ ಡಿ.ಡಿ. ಇಲ್ಲ, ಎಲ್ಲರನ್ನೂ ವರ್ಗಾವಣೆ ಮಾಡಿದ್ದಾರೆ. ರಸ್ತೆಗಳ ಪರಿಸ್ಥಿತಿಯನ್ನು ನೋಡಬೇಕಾದರೆ ಇಂಜಿನಿಯರುಗಳಿಲ್ಲ. ವರ್ಗಾವಣೆ ಮಾಡುವುದರಲ್ಲಿ ನಾನೇನೂ ಹಸ್ತಕ್ಷೇಪ ಮಾಡುತ್ತಿಲ್ಲ.

ಅಧ್ಯಕ್ಷರು:– ನೀವು ಹೀಗೆ ಚರ್ಚೆ ಮಾಡುತ್ತಾ ಹೋದರೆ ಹೇಗೆ?

ಶ್ರೀ ಕೆ.ಜಿ.ಬೋಪಯ್ಯ:– ಹೀಗೆ ಅಧಿಕಾರಿಗಳನ್ನು ವರ್ಗಾವಣೆ ಮಾಡುತ್ತಿದ್ದರೆ ಕೆಲಸ ಹೇಗೆ ಮಾಡಬೇಕು? ಜಿಲ್ಲಾಧಿಕಾರಿಗಳಿಲ್ಲ, ಜಿಲ್ಲಾದಿಕಾರಿಗಳನ್ನು ವರ್ಗಾವಣೆ ಮಾಡಿದ್ದೀರಿ.

ಅಧ್ಯಕ್ಷರು:– ಅದೆಲ್ಲ ಬೇಡ. ಮಳೆಯಿಂದ ಅನೇಕ ತೊಂದರೆಗಳಾಗಿದ್ದು ಅದಕ್ಕೆ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಿ ಎಂದು ಹೇಳಿ. ಅವರು ಏನು ಹೇಳುತ್ತಾರೋ ಹೇಳಲಿ.

ಶ್ರೀ ಕೆ.ಜಿ. ಬೋಪಯ್ಯ:– ಜಿಲ್ಲಾಧಿಕಾರಿಗಳನ್ನು ವರ್ಗಾವಣೆ ಮಾಡಿದ ಮೇಲೆ ಬದಲಿಯವರಾದರೂ ಬರಬೇಕು.

ಅಧ್ಯಕ್ಷರು:– ಅದು ಬೇರೆ ಮಾತು. ಅದು ಸರ್ಕಾರಕ್ಕೆ ಸೇರಿದ್ದು ಬಿಡಿ. ಅವರು ಏನು ಮಾಡಿಕೊಳ್ಳುತ್ತಾರೋ, ಮಾಡಿಕೊಳ್ಳಲಿ.

ಶ್ರೀ ಕೆ.ಜಿ.ಬೋಪಯ್ಯ:– ಮಾಡಲಿ, ನಾನು ಅದನ್ನು ಆಕ್ಷೇಪಣೆ ಮಾಡುವುದಿಲ್ಲ. ಆದರೆ ಜನರ ನೋವಿಗೆ ಸ್ಪಂದನೆ ಆಗುವಂಥ ಕೆಲಸ ನಮ್ಮ ಜಿಲ್ಲೆಯಲ್ಲಿ ಆಗುತ್ತಿಲ್ಲ. ಕೊಡಗು ಜಿಲ್ಲೆ ಎಂದರೆ ಕೇವಲ ಅಲ್ಲಿ ಮಳೆ ಬರಬೇಕು, ಕೆ.ಆರ್.ಎಸ್. ತುಂಬಬೇಕು ಎನ್ನುವ ಭಾವನೆಯಿಂದ ಹೊರಬನ್ನಿ.

ಅಧ್ಯಕ್ಷರು:– ಮಳೆ ಬಂದಾಗ ನೀರನ್ನೆಲ್ಲ ಕೂರ್ಗ್‌ನಲ್ಲೇ ಇಟ್ಟುಕೊಳ್ಳುವಿರಾ?

ಶ್ರೀ ಕೆ.ಜಿ.ಬೋಪಯ್ಯ:– ಬೇಡವೆಂದರೆ ಕೇರಳಕ್ಕೆ ತಿರುಗಿಸಬಹುದು.

ಅಧ್ಯಕ್ಷರು:–ಅಲ್ಲಿ ತಿರುಗಿಸುತ್ತೀರಿ?

ಶ್ರೀ ಕೆ.ಜಿ. ಬೋಪಯ್ಯ:– ಹಿಂದೆ ಮಹಾರಾಜರು ಮಾಡಿದ್ದರಂತೆ. ಕುಶಾಲನಗರದಿಂದ ತಿರುಗಿಸಿಬಿಡುವುದು ಎಂದು ಹಿಂದೆ ರಾಜರ ಕಾಲದಲ್ಲಿ ಒಂದು ಪ್ರೋಗ್ರಾಂ ಹಾಕಿದ್ದರಂತೆ. ನಾವು ಆ ಕೆಲಸವನ್ನು ಮಾಡುವುದಿಲ್ಲ. ಇಡೀ ಕರ್ನಾಟಕ ನೆಮ್ಮದಿಯಾಗಿರಬೇಕು. ಕರ್ನಾಟಕದ ಜನ, ವಿಶೇಷವಾಗಿ ಬೆಂಗಳೂರಿನ ಜನ ಸುಖಿಯಾಗಿರಬೇಕು. ಅದು ಇರಲಿ. ಆದರೆ ನಮ್ಮ ಜನರ ನೋವಿಗೆ ಸ್ಪಂದಿಸುವಂಥ ಕೆಲಸವಾಗಬೇಕು. ಕಾಫಿ, ಏಲಕ್ಕಿ ಬೆಳೆಗಳಿಗೆ ತಕ್ಷಣ ಪರಿಹಾರ ಕೊಡುವಂಥದ್ದು ಆಗಬೇಕು. 30 ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಕಳೆದ ವಾರ ವರದಿ ಬಂದರೆ ಒಂದು ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಜಿಲ್ಲಾಧಿಕಾರಿಗಳಿಂದ ಏನು ವರದಿ ಬಂದಿದೆ ಅದರಂತೆ ತಕ್ಷಣ ಪರಿಹಾರವನ್ನು ಕೊಡಬೇಕು. ಇದಕ್ಕೆ ಸ್ಪಂದಿಸುವಂಥ ಕೆಲಸ ಆಗಬೇಕು ಎಂದು ಎಲ್ಲ ಅಧಿಕಾರಿಗಳಿಗೆ ಸೂಚನೆ ಹೋಗಬೇಕು. ಕೇವಲ ಕೊಡಗಿನಲ್ಲಿ ಬೀಳುವ ಮಳೆಯನ್ನು ಮಾತ್ರ ಲೆಕ್ಕ ಹಾಕಿಕೊಂಡು ಕೂರುವುದಲ್ಲ ಎನ್ನುವುದು ನನ್ನ ಕಳಕಳಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಮಡಿಕೇರಿ):– ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳ ವರ್ಗಾವಣೆ ವಿಷಯವನ್ನು ಮಾನ್ಯ ಬೋಪಯ್ಯನವರು ಏಕೆ ಪ್ರಸ್ತಾಪ ಮಾಡಿದರು ಎಂದರೆ ಅಲ್ಲಿ ಅದಿಕಾರಿಗಳೇ ಇಲ್ಲದಂಥ ಪರಿಸ್ಥಿತಿಯಾಗಿದೆ. ನಾವು ಇಲ್ಲಿಂದ ಫೋನ್

ಮಾಡಿದರೂ ಕೂಡ ತಹಶೀಲ್ದಾರರು ಸ್ಪಾಟ್‌ಗೆ ಹೋಗುವುದಿಲ್ಲ. ಸುಮಾರು 75 ಮನೆಗಳು ಸಂಪೂರ್ಣವಾಗಿ ನಾಶವಾಗಿಹೋಗಿವೆ. ಕಾನೂರು, ಮೊಣ್ಣಂಗೇರಿ, ಶಾಂತಹಳ್ಳಿ ಇಲ್ಲಿ ಈಗಾಗಲೇ 200 ಇಂಚಿಗಿಂತ ಜಾಸ್ತಿ ಮಳೆಯಾಗಿದೆ. ಇಲ್ಲಿಂದ ವರದಿ ಕೊಟ್ಟರೂ ಕೂಡ ಸರಿಯಾದ ರೀತಿಯಲ್ಲಿ ಹಣ ಬಿಡುಗಡೆಯಾಗಿಲ್ಲ. ನಾವು ಬಹಳ ಕಷ್ಟದಲ್ಲಿದ್ದೇವೆ. ದಯವಿಟ್ಟು ತಾವು ಒಂದು ಡೈರೆಕ್ಷನ್ ಕೊಡಬೇಕು, ಅತಿವೃಷ್ಟಿಯನ್ನು ಪರಿಶೀಲನೆ ಮಾಡಲು ಒಂದು ಸಮಿತಿಯನ್ನು ಕಳುಹಿಸಬೇಕು ಮತ್ತು ಆದಷ್ಟು ಬೇಗನೆ ಪರಿಹಾರವನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಸಿರ್ಸಿ):– ಮಾನ್ಯ ಅಧ್ಯಕ್ಷರೆ, ಅತಿವೃಷ್ಟಿ ಬಗ್ಗೆ ಹಿಂದೆ ಸವಿಸ್ತಾರವಾಗಿ ಚರ್ಚೆಯಾಗಿದ್ದು ಮಾನ್ಯ ಕಂದಾಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಈಗ ಹೇಳುತ್ತಿರುವುದೇನೆಂದರೆ, ನಿನ್ನೆ, ಮೊನ್ನೆ, ಆಚೆಮೊನ್ನೆ, ಹೀಗೆ ಕಳೆದ 3–4 ದಿನಗಳಿಂದ ದಿನಕ್ಕೆ 150, 200, 250 ಮಿಲಿಮೀಟರ್ ಮಳೆಯಾಗುತ್ತಿದೆ. ನೀವು ವರದಿಯನ್ನು ತರಿಸಿಕೊಳ್ಳಿ. ನಾವು ಕಳೆದ ಶನಿವಾರ ಮತ್ತು ಭಾನುವಾರ ಊರಿನಲ್ಲಿದ್ದೆವು. ಅಲ್ಲಿ ಮಳೆಯಿಂದ ಆಗಿರುವಂಥ ದುಷ್ಪರಿಣಾಮಗಳನ್ನು ನೋಡಿದಾಗ, ಅಲ್ಲಿಯ ವರದಿಗಳನ್ನೆಲ್ಲ ಕೇಳಿದಾಗ, ಸರ್ಕಾರ ಅದಕ್ಕೆ ತಕ್ಷಣ ಹಣ ಬಿಡುಗಡೆ ಮಾಡದೇ ಹೋದರೆ ಅಲ್ಲಿ ಯಾವ ಕೆಲಸಕಾರ್ಯಗಳನ್ನೂ ತೆಗೆದುಕೊಳ್ಳಲು ಆಗುವುದಿಲ್ಲ ಎನ್ನುವ ಗಂಭೀರತೆ ಸರ್ಕಾರಕ್ಕೆ ಬರಬೇಕಾಗಿದೆ. ರಸ್ತೆಗಳು ಹಾಳಾಗಿದ್ದು ಓಡಾಡುವುದಕ್ಕೆ ಆಗುತ್ತಿಲ್ಲ. N.W.R.T.C.ಯ ಬಸ್ಸುಗಳು ನಿಂತುಹೋಗಿವೆ. ಓಡಾಡಲು ಆಗದ ರೀತಿಯಲ್ಲಿ ಧರೆ ಕುಸಿದು ಬಿದ್ದಿದೆ. ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡವರಿಗೆ ನಾಟಿ ಮಾಡಲು ಆಗುತ್ತಿಲ್ಲ, ನೀರು ನಿಂತುಬಿಟ್ಟಿದೆ. ತಕ್ಷಣ ಸರ್ಕಾರದಿಂದ ಹಣ ಬಿಡುಗಡೆಯಾದರೆ ಅಲ್ಲಿ ಅವರು ಬೇರೆ ಕೆಲಸಕಾರ್ಯಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಯಾವುದೇ ರೀತಿಯ ಕಾಮಗಾರಿಗಳನ್ನು ತೆಗೆದುಕೊಳ್ಳಲು ಆಗುವುದಿಲ್ಲ. ಕರೆಂಟ್ ಇಲ್ಲ. ನಾನು ಅವತ್ತೆ ಹೇಳಿದೆ, ಕರೆಂಟ್ ಇಲ್ಲದ 15 ದಿನಗಳಾಗಿದೆ. ಕಂಬ ಇಲ್ಲ, ವೈರ್ ಇಲ್ಲ ಎಂದು ನಾವು ಅವತ್ತು ಹೇಳಿದ ಸಮಸ್ಯೆಯನ್ನೇ ಮತ್ತೆ ಹೇಳಬೇಕಾಗುತ್ತದೆ. ಯಾವುದೇ ರೀತಿಯಾದಂಥ ಸ್ಪಂದನೆ ಸಿಗುತ್ತಿಲ್ಲ. ತಾವು ಇಲ್ಲಿಂದ ನಿರ್ದೇಶನವನ್ನು ಕೊಟ್ಟರುತ್ತೀರಿ. ಆದರೆ ಸ್ಥಳೀಯ ಮಟ್ಟದಲ್ಲಿ ಕಾರ್ಯಾಚರಣೆಯಾಗಬೇಕೆಂದರೆ, ಹಣ ಬಿಡುಗಡೆಯಾಗಬೇಕಾಗುತ್ತದೆ. ಮತ್ತೊಂದು

ತೊಂದರೆ ಎಂದರೆ ಗೊಬ್ಬರ ತೊಳೆದು ಹೋಗಿರುವುದು, ಭತ್ತ ತೊಳೆದು ಹೋಗಿರುವುದು, ಅಡಿಕೆಗೆ ವಿಶೇಷವಾದಂಥ ರೋಗ ಬಂದಿದೆ. ಮಳೆ ಜಾಸ್ತಿಯಾಗಿರುವುದರಿಂದ ಚಿಕ್ಕಚಿಕ್ಕ ಅಡಿಕೆಯನ್ನು ಇನ್ನೂ ಬೆಳೆದಿಲ್ಲ, ಹಸಿರು ಅಡಿಕೆ ಉದುರುತ್ತಿದೆ, ರೈತರಿಗೆ ಆತ್ಮವಿಶ್ವಾಸ ಕೊಡುವಂಥ ಪ್ರಕ್ರಿಯೆ ಆಗಬೇಕು. ತೋಟಗಾರಿಕೆ ಇಲಾಖೆಯವರು ಅಲ್ಲಿಗೆ ಹೋಗಿ ನೋಡಿ, ಅದು ಏಕೆ ಆಗುತ್ತಿದೆ ಎಂದು ತಿಳಿದುಕೊಂಡು ಅದಕ್ಕೆ ಏನಾದರೂ ಕೆಲವು ಔಷಧಿಗಳನ್ನು ಕೊಡಬೇಕು. ಮೈಲುತುತ್ತಕ್ಕೆ ಸಬ್ಸಿಡಿಯನ್ನು ಕೊಡುತ್ತಿದ್ದರು. ಆದರೆ ಈಗ ಮೈಲುತುತ್ತವೇ ಸಿಗುತ್ತಿಲ್ಲ. ಹೀಗಿರುವಾಗ ತಕ್ಷಣ ಹಣ ಬಿಡುಗಡೆ ಮಾಡಬೇಕು.

ಅಧ್ಯಕ್ಷರು:– ದೊಡ್ಡ ಚರ್ಚೆಯ ರೀತಿ ಹೇಳಿದರೆ ಹೇಗೆ? ಮಾನ್ಯ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. Zero Hour ನಲ್ಲಿ ಸಂಕ್ಷೀಪ್ತವಾಗಿ ಹೇಳಿದರೆ ಅವರು ಉತ್ತರ ಹೇಳುತ್ತಾರೆ. ಬೇರೆ ವಿಚಾರಗಳನ್ನು ಚರ್ಚೆ ಮಾಡುವ ಹಾಗೆ ನೀವು ಇದನ್ನೂ ಚರ್ಚೆ ಮಾಡಿದರೆ, ಇದು ಆಗುವ ಕೆಲಸವೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಲ್ಲಿ ಆಗುತ್ತಿರುವ ತೊಂದರೆಗಳಿಗೆ ಸ್ಪಂದಿಸಿ ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನವನ್ನು ಕೊಡದೇ ಹೋದರೆ ಅಲ್ಲಿ ಜನ ಕಷ್ಟದಲ್ಲೇ ಇರುವಂತಾಗುತ್ತದೆ. ನೋವಿಗೆ ಸರ್ಕಾರ ಸ್ಪಂದಿಸಿಲ್ಲ ಎನ್ನುವ ಭಾವನೆ ಬರಲು ಕಾರಣವಾಗುತ್ತದೆ. ತಕ್ಷಣ ತಾವು ಅದಕ್ಕೆ ನಿರ್ದೇಶನ ಕೊಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಅಂಗಾರ (ಸುಳ್ಯ): ಮಾನ್ಯ ಅಧ್ಯಕ್ಷರೆ, ನನ್ನ ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 1,623.5 ಮಿಲಿಮೀಟರ್ ಮಳೆ ಬೀಳುತ್ತದೆ. ಆದರೆ ಈಗಾಗಲೇ ಸುಮಾರು 2,324.1 ಮಿಲಿಮೀಟರ್‌ನಷ್ಟು ಮಳೆ ಬಿದ್ದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ಮಳೆ ಹೆಚ್ಚಾಗಿ ಅಡಿಕೆ ತೋಟಗಳಲ್ಲಿ ಔಷಧಿಯನ್ನು ಸಿಂಪಡನೆ ಮಾಡಲು ಆಗಲಿಲ್ಲ. ಮಳೆ ಬರುವ ಮುಂಚೆ ಅಂದರೆ ಮೂರು ತಿಂಗಳ ಮುಂಚೆ ಒಂದಷ್ಟು ಭಾಗದಲ್ಲಿ ಸಿಂಪಡನೆ ಮಾಡಿದ್ದರು. ನಿರಂತರವಾದ ಮಳೆಯಿಂದಾಗಿ ಈಗ ಅಲ್ಲಿ ಕೂಡ ರೋಗ ಬಂದಿದೆ. ಸಂಬಂಧಪಟ್ಟ ಸಚಿವರು ಇಲ್ಲಿ ಉತ್ತರ ಕೊಟ್ಟು, ಕೊಳೆ ರೋಗ ಬಂದುದಕ್ಕೆ ಒಂದು ಹೆಕ್ಟೇರ್ ಅಡಿಕೆ ತೋಟಕ್ಕೆ ಒಂದು ಸಾವಿರ ರೂಪಾಯಿ ಸಹಾಯಧನ ಕೊಡುತ್ತೇವೆ ಎಂದು ಹೇಳಿದ್ದಾರೆ. ನಾನು ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ, ಈ

ಸಹಾಯಧನವನ್ನು ಹೆಚ್ಚು ಮಾಡಬೇಕು. ಈಗ ನಿಗದಿಪಡಿಸಿರುವ ಸಹಾಯಧನ ಯಾವುದಕ್ಕೂ ಸಾಕಾಗುವುದಿಲ್ಲ. ಹೆಚ್ಚು ಸಹಾಯಧನ ಕೊಡುವಂಥ ಕೆಲಸವನ್ನು ಆದಷ್ಟು ಬೇಗನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : (ಕಂದಾಯ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಶೂನ್ಯವೇಳೆಯಲ್ಲಿ ಈಗ ಪ್ರಸ್ತಾಪ ಮಾಡಿರುವ ವಿಷಯವನ್ನು ಇದೇ ಸದಸ್ಯರು ನಿಯಮ 69ರಡಿಯಲ್ಲಿ ಅಲ್ಪಾವಧಿ ಚರ್ಚೆಯಲ್ಲಿ ಭಾಗವಹಿಸಿ ಸಮಗ್ರವಾಗಿ ಇದೇ ವಿಷಯಗಳನ್ನು ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ನಾನು ಸುದೀರ್ಘವಾದ ಉತ್ತರವನ್ನೂ ಕೊಟ್ಟಿದ್ದೇನೆ. ವಾಡಿಕೆ ಮಳೆಗಿಂತ ಹೆಚ್ಚಿನ ಮಳೆ ಬಂದಿದ್ದರಿಂದ ಆಗಿರುವಂಥ ಅನಾಹುತಗಳೇನು, ಅದರಿಂದ ಜನರು ಎಷಟು ಸಂಕಷ್ಟದಲ್ಲಿದ್ದಾರೆ, ಎಷ್ಟು ತೊಂದರೆಗೊಳಗಾಗಿದ್ದಾರೆ ಎನ್ನುವ ಬಗ್ಗೆ ಮತ್ತು ಸರ್ಕಾರ ಮುಂಜಾಗ್ರತೆ ವಹಿಸಿ ಏನೇನು ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎನ್ನುವ ಬಗ್ಗೆ ಸುದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಮತ್ತೆ ಈಗ ಶೂನ್ಯವೇಳೆಯಲ್ಲಿ ಅದೇ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ಈಗಾಗಲೇ ಅದಕ್ಕೆ ಹಣ ಬಿಡುಗಡೆಯನ್ನೂ ಮಾಡಿದ್ದೇವೆ, ಮತ್ತೆ ಮಾಡಬೇಕು. ಕ್ಯಾಬಿನೆಟ್ ಉಪ ಸಮಿತಿಯು ಸಭೆ ಸೇರಿ ಅಲ್ಲಿ ಏನು ತೀರ್ಮಾನ ಮಾಡಿದ್ದೇವೆ ಎನ್ನುವುದನ್ನು ಪ್ರತಿಯೊಬ್ಬ ಜಿಲ್ಲಾಧಿಕಾರಿಗೂ ಕಳುಹಿಸಿಕೊಟ್ಟಿದ್ದೇವೆ. ಇದಾದ ಮೇಲೆ ಮತ್ತೆ ಭಾರಿ ಮಳೆಯಾದುದರಿಂದ ನಾನೇ ಸ್ವತಃ ವಿಡಿಯೋ ಕಾನ್ಫರೆನ್ಸ್ ಮಾಡಿ ಈ ಜಿಲ್ಲೆಗಳಲ್ಲಿ ಅದರಲ್ಲೂ ವಿಶೇಷವಾಗಿ ಕರಾವಳಿ ಪ್ರದೇಶದ ಜಿಲ್ಲಾಧಿಕಾರಿಗಳ ಜೊತೆ ನೇರವಾಗಿ ಮಾತನಾಡಿ, ಅಲ್ಲಿ ಯಾವ ರೀತಿ ಪರಿಹಾರ ಮಾಡಬೇಕು, ಪರಿಸ್ಥಿತಿ ಹೇಗಿದೆ ಎಂದು ಪ್ರತಿಯೊಂದನ್ನೂ ಅವಲೋಕನ ಮಾಡಿ, ಅದರ ಬಗ್ಗೆ ತಮಗೆ ಹಣಕಾಸಿನ ತೊಂದರೆ ಇದ್ದರೆ ಅಥವಾ ಮತ್ತೊಂದು ಇದ್ದರೆ ನಮಗೆ ತಿಳಿಸಿ ಮತು ಈಗ ಬಿಡುಗಡೆ ಮಾಡಿರುವಂಥ ಹಣವನ್ನೂ ಸರಿಯಾದಂಥ ರೀತಿಯಲ್ಲಿ ಖರ್ಚು ಮಾಡಬೇಕು, ಸಂಕಷ್ಟದಲ್ಲಿರುವವರ ನೆರವಿಗೆ ಹೋಗಬೇಕು ಎಂದೂ ಹೇಳಿದ್ದೇವೆ. ನಾವು ಕಳೆದ ಸಾರಿ ಬೆಳಗಾವಿಯಲ್ಲಿ ಚರ್ಚೆ ಮಾಡಿದಾಗ, ಅಲ್ಲಿ ವಾಡಿಕೆ ಮಳೆಗಿಂತ ಕಡಿಮೆ ಮಳೆಯಾಗಿತ್ತು. ಆದರೆ ಈಗ ವಿಪರೀತ ಮಳೆಯಾಗಿದೆ. ನಾವು ನಿನ್ನೆ 50 ಲಕ್ಷ ರೂಪಾಯಿಗಳನ್ನು ದೋಣಿಗಳನ್ನು ತೆಗೆದುಕೊಳ್ಳಲು ಬಿಡುಗಡೆ ಮಾಡಿದ್ದೇವೆ. ಗಂಜಿ ಕೇಂದ್ರಗಳನ್ನು ತೆರೆದಿದ್ದೇವೆ. ವಿದ್ಯುಚ್ಛಕ್ತಿಯ ತೊಂದರೆ ಇದ್ದರೆ ಅದನ್ನು ಸರಿಪಡಿಸುವ ರೀತಿಯಲ್ಲಿ ನಾವು ಪ್ರತಿಯೊಬ್ಬ ಜಿಲ್ಲಾಧಿಕಾರಿಯೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದೇವೆ. ನಾನೇ ವಿಡಿಯೋ ಕಾನ್ಫರೆನ್ಸ್ ಮಾಡಿ ಅವರೆಲ್ಲರಿಗೂ ಆದೇಶವನ್ನು ಕೊಟ್ಟಿದ್ದೇನೆ. ಅತಿವೃಷ್ಟಿ

ಅನಾವೃಷ್ಟಿ ಇವೆರಡನ್ನೂ ಕೂಡ ನಾವು ನೋಡಬೇಕಾಗುತ್ತದೆ. ಒಂದು ಕಡೆ ಭಾರಿ ಮಳೆಯಾಗುತ್ತಿದ್ದರೆ, ಅರಸೀಕೆರೆಯಲ್ಲಿ ಯಾವ ರೀತಿಯ ಪರಿಸ್ಥಿತಿ ಇದೆ, ಬರ ಹೇಗಿದೆ ಎಂದು ಮೊನ್ನೆ ಶಿವಲಿಂಗೇಗೌಡರು ಪ್ರಸ್ತಾಪ ಮಾಡಿದರು. ಎರಡನ್ನೂ ನಾನು ಗಮನದಲ್ಲಿಟ್ಟುಕೊಂಡು ಸಂಬಂಧಪಟ್ಟಂಥ ಜಿಲ್ಲಾಧಿಕಾರಿಗಳೆಲ್ಲರ ಹತ್ತಿರವೂ ನಾನು ವಿಡಿಯೋ ಕಾನ್ಫರೆನ್ಸ್ ಮುಖಾಂತರ ಮಾತನಾಡಿದ್ದೇನೆ, ಅವರ ಸಂಪರ್ಕದಲ್ಲಿದ್ದೇನೆ. ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಮಂತ್ರಿಗಳಾಗಿರುವಂಥ ದೇಶಪಾಂಡೆಯವರು ಸತತವಾಗಿ ನನ್ನ ಸಂಪರ್ಕದಲ್ಲಿದ್ದಾರೆ. ಪರಿಹಾರಕ್ಕಾಗಿ ಈಗ ಕೊಟ್ಟಿರುವಂಥ ಹಣ ಸಾಕಾಗಿಲ್ಲ. ಇನ್ನೂ ಬೇಕು ಎಂದು ಹೇಳಿದ್ದಾರೆ, ಅದು ನಮ್ಮ ಗಮನದಲ್ಲಿದೆ. ಕಂದಾಯ ಇಲಾಖೆಯವರು ಈಗ ಏನು ಮಾಡಬಹದು ಎಂದು ಕೊಟ್ಟಿದ್ದಾರೆ. ಉದಾಹರಣೆಗೆ, 30 ಕೋಟಿ ನಷ್ಟವಾಗಿದೆ ಎಂದರೆ ಒಂದು ಕೋಟಿ ಕೊಟ್ಟಿದ್ದಾರೆ ಎಂದು ಬೋಪಯ್ಯನವರು ಹೇಳಿದರು. 30 ಕೋಟಿಯನ್ನೂ ಒಟ್ಟಿಗೆ ಕೊಡಲು ಆಗುವುದಿಲ್ಲ. ಅದು ಬೇರೆಬೇರೆ ಇಲಾಖೆಗಳಿಗೆ ಸಂಬಂಧಪಟ್ಟಿರುತ್ತದೆ. ಆದರೆ ಅದನ್ನು ಸರಿಪಡಿಸಲು ಏನಾಗಬೇಕು ಎನ್ನುವ ರೀತಿ ನೋಡುತ್ತೇವೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: 30 ಕೋಟಿ ರೂಪಾಯಿ ಕೇಳಿದರೆ ಅದರಲ್ಲಿ ಒಂದು ಕೋಟಿ ಕೊಟ್ಟರೆ ಹೇಗೆ? ಬಕಾಸುರನ ಹೊಟ್ಟೆಗೆ ಮೂರುಕಾಸಿನ ಮಜ್ಜಿಗೆ ಎನ್ನುವಂತಾಗುತ್ತದೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ನಾವು ನಿರಂತರವಾಗಿ ಜಿಲ್ಲಾಧಿಕಾರಿಯವರ ಸಂಪರ್ಕದಲ್ಲಿದ್ದು, ಅದನ್ನು ಮಾಡಿಕೊಡುತ್ತೇವೆ. ಅದರ ಬಗ್ಗೆ ತಮಗೆ ಯಾವುದೇ ರೀತಿಯಾದಂಥ ಆತಂಕ ಬೇಡ ಎಂದು ನಾನು ಸದಸ್ಯರಿಗೆ ತಿಳಿಸುತ್ತೇವೆ.

ಶ್ರೀ ಕೆ.ಜಿ. ಬೋಪಯ್ಯ: ಕಾಫಿ ಬಗ್ಗೆ ಏನೂ ಹೇಳಲಿಲ್ಲ. ಕಾಫಿ ಬೆಳೆಗೆ ಪರಿಹಾರ ಕೊಡುತ್ತೇವೆ ಎಂದು ಹೇಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ನಾನು ಪರಿಶೀಲಿಸುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ: ಪರಿಶೀಲಿಸುವುದಲ್ಲ. ಮಳೆ ಬಂದುದರಿಂದ ಇಡೀ ಕಾಫಿ ತೋಟಕ್ಕೆ ಯಾರೂ ಔಷಧಿಯನ್ನು ಸ್ಪ್ರೇ ಮಾಡಿಲ್ಲ, ಗೊಬ್ಬರ ಹಾಕಿಲ್ಲ. ಅದಕ್ಕೆ ಪರಿಹಾರ ಕೊಡುತ್ತೇವೆ ಎಂದು ನೀವು ಹೇಳಿ.

ಶ್ರೀ ಎ. ಶ್ರೀನಿವಾಸ ಪ್ರಸಾದ್ : ಸದ್ಯಕ್ಕೆ ಪರಿಹಾರದ ಪ್ರಶ್ನೆಯಿಲ್ಲ. ಸದ್ಯಕ್ಕೆ ಅಲ್ಲಿ ಜನರು ಏನು ಕಷ್ಟದಲ್ಲಿದ್ದಾರೆ, ಅದನ್ನು ಬಗೆಹರಿಸಲು, ಅವರಿಗೆ ಸಮಾಧನ ಮಾಡಲು ನೋಡಬೇಕು.

ಶ್ರೀ ಕೆ.ಜಿ. ಬೋಪಯ್ಯ: ಈಗ ನೀವು ಅಸೆಸ್‌ಮೆಂಟ್‌ಗೆ ಹೋದರೆ, ಅಲ್ಲಿ ಈಗ ಕಾಫಿಯೆಲ್ಲ ಮಣ್ಣೊಳಗೆ ಹೋಗಿ ಆಗಿದೆ, ಅಲ್ಲಿ ಏನೂ ಕಾಣುವುದಿಲ್ಲ. ಅದನ್ನು ನೀವು ಮಾಡಬೇಕಲ್ಲವೇ? ಏನೂ ಮಾಡದೆ ಈ ರೀತಿ ಉತ್ತರ ಹೇಳುವುದು ಸರಿಯಲ್ಲ. ಅವರ ತೊಂದರೆಗೆ ಸ್ಪಂದಿಸುವುದು ಬೇರೆ. ಕಾಫಿ ಬೆಳೆಗೆ ಪರಿಹಾರವನ್ನು ಕೊಡುತ್ತೇವೆ ಎನ್ನುವ ಬಗ್ಗೆ ಸ್ಪಷ್ಟವಾದ ನಿರ್ದೇಶನ ಕೊಡಿ.

ಅಧ್ಯಕ್ಷರು: ಹೀಗೇ ಹೇಳಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಅವರು ಏನು ಹೇಳುತ್ತಾರೋ ಹೇಳಲು ಬಿಡಿ.

ಶ್ರೀ ಕೆ.ಜಿ. ಬೋಪಯ್ಯ: ಸ್ಪಷ್ಟವಾದ ನಿರ್ದೇಶನ ಕೊಡಿ ಕೊಡುತ್ತೇನೆಂದು ಹೇಳಿ.

3) **ವಿಷಯ:** ಮಂಡ್ಯ MUDA ಬಗ್ಗೆ

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಮೇಲುಕೋಟೆ): ಮಾನ್ಯ ಅಧ್ಯಕ್ಷರೆ, ಎಲ್ಲರಿಗೂ ಗೊತ್ತಿರುವಂತೆ ಮಂಡ್ಯದಲ್ಲಿ 2009ರಲ್ಲಿ MUDA ಆಡಳಿತ ಮಂಡಳಿಯವರು ಒಂದು sq. feet ಗೆ ಎರಡು ಸಾವಿರ, ಎರಡೂವರೆ ಸಾವಿರ ರೂಪಾಯಿಗಳಂತೆ ಭೂಮಿಯನ್ನು ಕೊಳ್ಳುತ್ತೇವೆಂದರು. ಸುಮಾರು 23 ಸಾವಿರ ಜನ application ಹಾಕಿದ್ದರು. ಮನಸೋ ಇಚ್ಛೆ ಸುಮಾರು 107 ನಿವೇಶಗಳನ್ನು ರಾಜಕಾರಣಿಗಳು, ಇನ್ನಿತರೆ ಸ್ವ ಇಚ್ಛೆ ಇರುವವರು ತಾವು ತಾವೇ ಹಂಚಿಕೊಂಡು ದೊಡ್ಡ ಹಗರಣವಾಗಿದೆ. ಹಿಂದೆ ಇದ್ದ ಸರ್ಕಾರ ಒಂದು ಸಮಿತಿ ರಚಿಸಿ ಅದರಿಂದ ಸಂಪೂರ್ಣ ವಿವರಣೆ ಪಡೆದಿತ್ತು. ನ್ಯಾಯಾಲಯದಲ್ಲೂ ಆ ಮೊಕದ್ದಮೆ ಇರುವುದರಿಂದ ಸರ್ಕಾರ ತಕ್ಷಣ ಆ 107 ನಿವೇಶಗಳನ್ನು ವಜಾ ಮಾಡಿ ನಿಜವಾಗಿ ಯಾರಿಗೆ serial number ಪ್ರಕಾರ ನಿವೇಶನ ಕೊಡಬೇಕೋ ಅವರಿಗೆ ಕೊಡಬೇಕು.

ಅಧ್ಯಕ್ಷರು: ಮುಂದೆ ಏನು ಮಾಡಬೇಕು ಹೇಳಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಆದ್ದರಿಂದ, ದಯವಿಟ್ಟು ಇದಕ್ಕೆ ಸಮಂಜಸವಾದ ಉತ್ತರ ಕೊಡಬೇಕು.